# ಅಣಕು ಸಂದರ್ಶನ ಕಾರ್ಯಕ್ರಮ

ಸಕಲೇಶಪುರ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ದಿನಾಂಕ 05.05.2023 ರಂದು 3ನೇ ಸಮಿಸ್ಟರ್‌ನ ಬಿಇಡಿ ಪ್ರಶಿಕ್ಷಣಾರ್ಥಿಗಳಿಗೆ ಅಣಕು ಸಂದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಅಣಕು ಸಂದರ್ಶನ ಕಾರ್ಯಕ್ರಮಕ್ಕೆ ಬಾಹ್ಯ ಪರೀಕ್ಷಕರನ್ನಾಗಿ ಅನುಭವಿ ಹಾಗೂ ಪರಿಣಿತ ಸಂಪನ್ಮೂಲ ವ್ಯಕ್ತಿಗಳಾದ ಸಕಲೇಶಪುರ ಸೇಂಟ್ ಆಗ್ನೇಸ್ ಪದವಿ ಪೂರ್ವ ಕಾಲೇಜಿನನ ನಿವೃತ್ತ ಪ್ರಾಂಶುಪಾಲರಾದ ಶ್ರೀ ವೇಣುಗೋಪಾಲ್, ಆಕ್ಸ್‌ಫರ್ಡ್ ಪ್ರೌಢಶಾಲೆಯ ಪ್ರಾಂಶುಪಾಲರಾದ ಶ್ರೀ ಅಣ್ಣಪ್ಪಸ್ವಾಮಿ, ಹಾಸನಾಂಬ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಪ್ರಕಾಶ್ ಹೆಚ್.ಎಸ್, ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ನಿವೃತ್ತ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಅಬ್ದುಲ್ ಖಾದರ್, ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ನಿವೃತ್ತ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಮೀನಾಕ್ಷಿ ಎಸ್.ಎಂ, ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯದ ಅತಿಥಿ ಉಪನ್ಯಾಸಕರಾದ ಶ್ರೀ ವಿನಯ್ ಎ ಜೆ ರವರನ್ನು ಒಳಗೊಂಡಂತೆ, ಆಂತರಿಕ ಪರೀಕ್ಷಕರಾಗಿ ನಮ್ಮ ಕಾಲೇಜಿನ ಸಹಾಯಕ ಪ್ರಾಧ್ಯಾಪಕರುಗಳು ಭಾಗವಹಿಸಿ ಪ್ರಶಿಕ್ಷಣಾರ್ಥಿಗಳಿಗೆ ಪರಿಣಾಮಕಾರಿಯಾಗಿ ಸಂದರ್ಶನವನ್ನು ನಡೆಸಲಾಯಿತು.

ಪ್ರಸ್ತುತ ಸ್ಪರ್ಧಾತ್ಮಕ ಜಗತ್ತಿನಲ್ಲಿ ಪ್ರಶಿಕ್ಷಣಾರ್ಥಿಗಳು ಬಿ.ಇಡಿ ಕೋರ್ಸ ನಂತರ ವೃತ್ತಿಗೆ ಸೇರಲು ಅನುಕೂಲವಾಗುವ ದೃಷ್ಟಿಯಿಂದ ಆತ್ಮವಿಶ್ವಾಸದಿಂದ ಸಂದರ್ಶನವನ್ನು ಎದುರಿಸುವ ಬಗ್ಗೆ, ರೆಸ್ಯೂಮ್ ತಯಾರಿ ಬಗ್ಗೆ, ಪ್ರಚಲಿತ ವಿಧ್ಯಮಾನಗಳ ಸಾಮಾನ್ಯ ಜ್ಞಾನದ ಅರಿವು ಪರಿಶೀಲನೆ, ವಿಷಯದ ಪ್ರಭುತ್ವದ ಬಗ್ಗೆ ಪರಿಶೀಲನೆ, ಸಂದರ್ಶನದ ಸಂದರ್ಭದಲ್ಲಿ ಧರಿಸಬಹುದಾದ ವೇಷ ಭೂಷಣಗಳ ಬಗ್ಗೆ ಅರಿವು ಹಾಗೂ ಇನ್ನಿತರ ಅಭಿಕ್ಷಮತೆಗಳನ್ನು ಪರೀಕ್ಷಿಸಿ ಪ್ರಶಿಕ್ಷಣಾರ್ಥಿಗಳಿಗೆ ನೈತಿಕ ಸ್ಥೈರ್ಯವನ್ನು ತುಂಬಲಾಯಿತು.

ಸಂದರ್ಶನದ ನಂತರದಲ್ಲಿ ಪ್ರಶಿಕ್ಷಣಾರ್ಥಿಗಳು ಪಡೆದ ಅಂಕಗಳನ್ನು ತಿಳಿಸಿ ಮುಂದಿನ ದಿನಗಳಲ್ಲಿ ಅವರಲ್ಲಿ ಕೊರತೆಯಿರುವ ಸಾಮರ್ಥ್ಯಗಳ ಬಗ್ಗೆ ತಿಳಿಸಿ ಅಭಿವೃದ್ಧಿಪಡಿಸಿಕೊಳ್ಳಲು ತಿಳಿಸಲಾಯಿತು.






PRINCIPAL
J.S.S. Institute of Education
P.B. 26, SAKALESHPUR-573 134
Hassan Dist